**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 51/2023**

ಪಿ.ಡಬ್ಲುಃ 5 ಸಿಡಬ್ಲುಃ 14

| | | |
|---|---|---|
| ಸಾಕ್ಷಿಯ ಹೆಸರು | : | ಮೆಹಬೂಬ್ ಬೀ |
| ಗಂಡನ ಹೆಸರು | : | ರೆಹಮಾನ್ ಸಾಬ್ |
| ವಯಸ್ಸು | : | 43 ವರ್ಷ |
| ವೃತ್ತಿ | : | ಗೃಹಿಣಿ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 05-01-2024

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನಾನು ಬಳ್ಳಾರಿಯ ಡಿ ಎ ಆರ್ ಬಳಿ ಇರುವ ಪೊಲೀಸ್ ಕ್ವಾರ್ಟರ್ಸ್‌ನಲ್ಲಿ ವಾಸವಾಗಿರುತ್ತೇನೆ. ನಮ್ಮ ಮನೆಯ ನಂಬರ್ 7. ನಮ್ಮ ಮನೆಯ ನೆಲ ಮಹಡಿ ಆಗಿರುತ್ತದೆ. ನನಗೆ ಮೃತ ಜಾಫರ್ ಸಾಬ್ ಪರಿಚಯ. ಆತನು ಪೊಲೀಸ್ ಆಗಿದ್ದು ನಮ್ಮ ಮನೆಯ ಮೇಲೆ ಇರುವ 2 ನೇ ಮಹಡಿಯಲ್ಲಿ ವಾಸವಾಗಿದ್ದನು. ಆತನ ಮನೆಯ ನಂಬರ್ 11. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯ ಪರಿಚಯ ಇರುತ್ತದೆ. ಆರೋಪಿಯೂ ಜಾಫರ್ ನೊಂದಿಗೆ ನಮ್ಮ ಮೇಲಿನ ಮನೆಯಲ್ಲಿ ವಾಸವಾಗಿದ್ದರು. ಆರೋಪಿ ಮತ್ತು ಜಾಫರ್ ದಿನಾಲು ಜಗಳ ಮಾಡುತ್ತಿದ್ದರು. ದಿನಾಲೂ ಜಗಳ ಮಾಡುತ್ತಿರುವುದರಿಂದ ಈ ರೀತಿ ಏಕೆ ಜಗಳ ಮಾಡುತ್ತಾರೆ ಎಂದು ಅವರು ಗಂಡ ಹೆಂಡತಿ ಅಲ್ಲ ಎಂದು ಆಮೇಲೆ ಗೊತ್ತಾಯಿತು.

ದಿಃ 22-03-2023 ರಂದು ಅಂದರೆ ಉಗಾದಿ ಹಬ್ಬದ ದಿನದಂದು ರಾತ್ರಿ 8-00 ಗಂಟೆ ಸುಮಾರಿಗೆ ಆರೋಪಿ ಮನೆಯಲ್ಲಿ ಗಲಾಟೆಯಾಗಿದ್ದು ನಂತರ ನಾನು , ಹೇಮಲತಾ ಮತ್ತು ಪುಷ್ಪಾಲತಾ ಇವರು 3 ಜನ ಇರುವಾಗ ಆರೋಪಿಯೂ ಕಸದ ಡಬ್ಬಿಯನ್ನು ತೆಗೆದುಕೊಂಡು ಕತ್ತಲಲ್ಲಿ ಬನ್ನಿ ಗಿಡ ದ ಹತ್ತಿರ ಹೋಗಿ ಕಸವನ್ನು ಸದರಿ ಕಾಂಪೌಂಡ್

ಆಚೆಗೆ ಹಾಕಿ ಅಲ್ಲೆ ಆಕಡೆ ಈ ಕಡೆ ಗಾಬರಿಯಿಂದ ತಿರುಗಾಡುತ್ತಿದ್ದಳು. ಆಗ ನಾವು ಹಬ್ಬದ ದಿನ ಕಸ ಏಕೆ ಹೊರಗೆ ಹಾಕುತ್ತಾಳೆ ಎಂದು ಮತ್ತೆ ಏಕೆ ಈ ರೀತಿ ತಿರುಗಾಡುತ್ತಾಳೆ ಎಂದು ಮಾತನಾಡುಕೊಂಡೆವು. ರಾಃ **9-00** ಗಂಟೆ ಸುಮಾರಿಗೆ ಆರೋಪಿಯೂ ತನ್ನ ಮನೆಗೆ ಹೋಗಿ ಅಲ್ಲಿ ಕೊಟ್ರೆಶಣ್ಣ ನನ್ನ ಗಂಡನಿಗೆ ಯಾರೋ ಹೊಡೆದಿದ್ದಾರೆ ಎಂದು ಕೂಗಿದಳು. ಆಗ ಇವಾಗಲೇ ಮೇಲೆ ಹೋಗಿರುತ್ತಾಳೆ ಏನಾಯಿತು ಎಂದು ಚಾಸಾ-**12** ಮತ್ತು **13** ರವರೊಂದಿಗೆ ಅವಳ ಮನೆಗೆ ಹೋಗಿ ನೋಡಿರುತ್ತೇವೆ. ಅಲ್ಲಿ ನೋಡಲಾಗಿ ಜಾಫರನು ರಕ್ತದ ಮಡುವಿನಲ್ಲಿದ್ದು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. **102** ನಂಬರ್ ಗೆ ಫೋನ್ ಕರೆ ಮಾಡಲಾಗಿ ಆಂಬ್ಯೂಲೆನ್ಸ್ ಅಲ್ಲಿಗೆ ಬಂದಿರುತ್ತದೆ. ಆತನನ್ನು ಕೆಳಗೆ ತೆಗೆದುಕೊಂಡು ಬಂದು ಆಂಬ್ಯೂಲೆನ್ಸ್ ನಲ್ಲಿ ಹಾಕಲಾಗಿ ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ಆತನು ಮರಣ ಹೊಂದಿರುತ್ತಾನೆ ಎಂದು ವೈದ್ಯಾಧಿಕಾರಿಗಳು ತಿಳಿಸಿರುತ್ತಾರೆ.

ಮಾರನೇ ದಿನ ಆರೋಪಿಯನ್ನು ಪೊಲೀಸರು ಕರೆದುಕೊಂಡು ಬಂದಾಗ ಆರೋಪಿಯೂ ಡಸ್ಟ ಬೀನ್ ಹಾಕಿದ ಸ್ಥಳವನ್ನು ತೋರಿಸಿದ್ದು ಅದನ್ನು ನಾವು ನೋಡಿರುತ್ತೇವೆ. ಈ ಬಗ್ಗೆ ಗಾಂಧಿನಗರ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ.

<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ ಎನ್ ಎಸ್ ಎಸ್ ವಕೀಲರಿಂದಃ</u>

ಮೃತ ಜಾಫರ್ ಸಾಬ್ ನು ಆತನು ಸಾಯುವ ಅಂದಾಜು **8** ತಿಂಗಳ ಮೊದಲು ಕ್ವಾರ್ಟಸ್ ಗೆ ವಾಸ ಮಾಡಲು ಬಂದಿರುತ್ತಾನೆ. ನಾವು ಮತ್ತು ಮೃತ ಜಾಫರ್ ಸಾಬ್ ನು ಒಂದೇ ಜಾತಿಯವರು ಎಂದರೆ ಸರಿ. ಆರೋಪಿ ಮತ್ತು ಜಾಫರ್ ಸಾಬ್ ರವರು ನಮಗೆ ಅಷ್ಟೊಂದು ಪರಿಚಯ ಇಲ್ಲ ಆದರೆ ಹಾಯ್ ಬಾಯ್ ಹೇಳುತ್ತಿದ್ದೆವು. ಕೊಟ್ರೇಶ್ ರವರು ಜಾಫರ್ ಸಾಬ್ ನ ಕ್ವಾರ್ಟಸ್ ನ ಪಕ್ಕದ ಕ್ವಾರ್ಟಸ್ ನಲ್ಲಿ ವಾಸವಿರುತ್ತಾರೆ. ನಾನು, ಚಾಸಾ-**12** ಮತ್ತು **13** ರವರು ಹಾಗೂ ಕೊಟ್ರೇಶ್ ರವರು ಆರೋಪಿಯೂ ಕರೆದಾಗ ಮೇಲೆ ಹೋಗಿ ಜಾಫರ್ ಸಾಬ್ ನನ್ನು ನೋಡಿರುತ್ತೇವೆ. ನಾವು ಮತ್ತು ಕೊಟ್ರೇಶ್ ರವರು ಜಾಫರ್ ಸಾಬ್ ನನ್ನು ಮೊದಲು ನೋಡಿರುತ್ತೇವೆ. ಆಂಬ್ಯೂಲೆನ್ಸ್ ಗೆ ಯಾರು ಫೋನ್

ಮಾಡಿದರು ಎಂದು ಗಾಬರಿಯಲ್ಲಿ ಯಾರು ಫೋನ್ ಮಾಡಿದರು ಎಂದು ನನಗೆ ಈಗ ಗೊತ್ತಿಲ್ಲ.

ಬನ್ನಿ ಗಿಡವು ಕಾಂಪೊಂಡ್ ಹತ್ತಿರ ಇರುತ್ತದೆ. ಕಾಂಪೊಂಡ್ ಮೇಲೆ ತಂತಿ ಸುತ್ತಿದ್ದು ಅದು ಎಷ್ಟು ಅಡಿ ಎತ್ತರ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಕಾಂಪೊಂಡ್ ನನ್ನಷ್ಟು ಎತ್ತರ ಇರಬಹುದು. ಪ್ರತಿದಿನ ಕಸದ ಡಬ್ಬಿ ತೆಗೆದುಕೊಂಡು ಹೋಗಲು ಮಹಾನಗರ ಪಾಲಿಕೆಯ ವಾಹನ ಬರುತ್ತದೆ ಎಂದರೆ ಸರಿ. ಸದರಿ ತಂತಿಯೂ ಕಾಂಪೊಂಡ್ ಮೇಲೆ ಎಷ್ಟು ಅಡಿ ಎತ್ತರವಾಗಿದೆ ಎಂದು ನನಗೆ ಹೇಳಲು ಗೊತ್ತಾಗುವುದಿಲ್ಲ. ಆಂಬ್ಯೂಲೆನ್ಸ ಬಂದ ನಂತರ ಜಾಫರನ ಜೊತೆಗೆ ನಾವು ಕೆಳಗೆ ಬಂದಿರುತ್ತೇವೆ. ನಾವು ಜಾಫರನ್ ಮನೆಗೆ ಹೋದಾಗ ಸಮಯ ಅಂದಾಜು 9-00 ಗಂಟೆ ಆಗಿತ್ತು.

ನಾನು , ಚಾಸಾ-12 ಮತ್ತು 13 ರವರು ಕೆಳಗೆ ಮಾತನಾಡುತ್ತಾ ನಿಂತಾಗ ಸಮಯ ರಾಃ 8-00 ಗಂಟೆ ಆಗಿತ್ತು. ರಾಃ 8-00 ಗಂಟೆಯಿಂದ ನಾವು ಜಾಫರನ ಮನೆಗೆ ಹೋಗುವವರೆಗೂ ಅಲ್ಲೆ ಮಾತನಾಡುತ್ತಾ ನಿಂತಿದ್ದೆವು. ನಾನು ಪೊಲೀಸರ ಮುಂದೆ ರಾಃ 9-00 ಗಂಟೆಗೆ ಹೇಮಲತಾ ಮತ್ತು ಪುಷ್ಪಾಲತಾ ಇವರು ಗಿಡದ ಬಳಿ ನಿಂತು ಮಾತನಾಡುತ್ತಿದ್ದೆವು ಎನ್ನುವುದನ್ನು ಹೇಳಿದ್ದೇನೆ. ನಾನು ಮತ್ತು ಚಾಸಾ-12 ಮತ್ತು 13 ರವರು ಅಲ್ಲಿ ಕುಳಿತು ಮಾತಿನಾಡುತ್ತಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಃ 8-00 ಗಂಟೆ ಸುಮಾರಿಗೆ ಮೃತ ಹಾಗೂ ಆರೋಪಿಯೂ ಮನೆಯಲ್ಲಿ ಜಗಳ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯೂ ಡಸ್ಟಬೀನ್ ತೆಗೆದುಕೊಂಡು ಬನ್ನಿ ಗಿಡದ ಹತ್ತಿರ ಕಾಂಪೋಂಡ್ ಆಚೆಗೆ ಕಸ ಚಲ್ಲಿದಳು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾರನೆ ದಿನ ಪೊಲೀಸರು ಆರೋಪಿಯನ್ನು ಕರೆದುಕೊಂಡು ಬಂದಾಗ ಅವಳು ಡಸ್ಟಬೀನ್ ನಿಂದ ಕಸ ಹಾಕಿದ ಸ್ಥಳ ಪೊಲೀಸರಿಗೆ ತೋರಿಸಿದ್ದನ್ನು ನಾನು ನೋಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಜಾಫರ ಸಾಬ್ ನ ಮೊದಲನೆಯ ಹೆಂಡತಿಯನ್ನು ನಾನು ನೋಡಿರುತ್ತೇನೆ. ಜಾಫರ ಸಾಬ್ ನು ಮೊದಲನೆ ಹೆಂಡತಿಯೊಂದಿಗೆ ಮನೆ ನಂ. 11 ರಲ್ಲಿ ವಾಸವಾಗಿರುವುದಿಲ್ಲ. ಆತನ ಮೊದಲನೆ ಹೆಂಡತಿಯ ಹೆಸರು ನವೀನ್ ತಾಜ್. ಜಾಫರ್ ಸಾಬ್ ಮರಣ ಹೊಂದಿದ ನಂತರ ಆತನ ಮೊದಲನೆ ಹೆಂಡತಿಯನ್ನು ನಾನು ನೋಡಿರುತ್ತೇನೆ. ಅವಳು ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾಳೆ. ಸದರಿ ಅವರು ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ, ಪೊಲೀಸರು ಕರೆದುಕೊಂಡು ಬಂದಿರುತ್ತಾರೆ. ಈ ದಿನ ನ್ಯಾಯಾಲಯದಲ್ಲಿ ಅವಳನ್ನು ನಾನು ಮಾತನಾಡಿಸಿರುವುದಿಲ್ಲ. ಆರೋಪಿಯೂ ಜಾಫರ್ ಸಾಬ್ ನ 2 ನೇ ಹೆಂಡತಿ ಎಂದರೆ ಸರಿಯಲ್ಲ. ಜಾಫರ್ ಸಾಬ್ ನ ಮೊದಲನೆ ಹೆಂಡತಿಯ ಮಾತು ಕೇಳಿ ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಾಫರ್ ಸಾಬ್‌ನ ಸಾವಿಗೂ ಮತ್ತು ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.